**ದಿನಾಂಕಃ04.07.2023 ರಂದು ಸಾಕ್ಷಿದಾರರು ಹಾಜರಿದ್ದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಮಾಡಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ಶ್ರೀ ಎಂ.ಆರ್. ವಕೀಲರಿಂದಃ-**

ನಾನು 8 ನೇ ತರಗತಿಯವರೆಗೆ ಓದಿದ್ದೇನೆ. ಪಿಟ್ಲಾಲಿ ಗ್ರಾಮದಲ್ಲಿರುವ ಸರ್ವೆ ನಂಬರ್ಃ 2 ರಲ್ಲಿ 3 ಎಕರೆ 28 ಗುಂಟೆ ಜಮೀನು ಇದೆ. ವಾದಿಯ ತಂದೆ ದಿನಾಂಕಃ11.12.1985 ರಲ್ಲಿ ರಂಗನಾಯಕ ತಂದೆ ಸಣ್ಣ ರಂಗನಾಯಕರವರಿಂದ ಸದರಿ 3 ಎಕರೆ 28 ಗುಂಟೆ ಜಮೀನಿನ ಪೈಕಿ 1 ಎಕರೆ ಜಮೀನನ್ನು ನೋಂದಾಯಿತ ಕ್ರಯಪತ್ರದ ಮೂಲಕ ಕ್ರಯಕ್ಕೆ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಸ್ವತ್ತನ್ನು ದಾವಾ ಎ ಷೆಡ್ಯೂಲ್ ಸ್ವತ್ತು ಎಂದು ತೋರಿಸಿದ್ದೇನೆ ಎಂದರೆ ಸರಿ. ಮೇಲಿನ ಕ್ರಯದಂತೆ ವಾದಿಯ ತಂದೆಯ ಹೆಸರಿಗೆ ಖಾತೆ ವರ್ಗಾವಣೆಯಾಗಿತ್ತು ಎಂದರೆ ಸರಿಯಲ್ಲ. ವಾದಿಯ ತಂದೆ ರಾಮಕೃಷ್ಣರೆಡ್ಡಿಯವರು ತೀರಿಕೊಂಡ ನಂತರ ವಾದಿಯ ತಾಯಿಯ ಹೆಸರಿಗೆ ಪೌತಿ ಖಾತೆಯಾಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಜಮೀನನ್ನು ವಾದಿ ಮತ್ತು ಅವರ ತಾಯಿ ಜಂಟೀ ಸ್ವಾಧೀನಾನುಭವದಲ್ಲಿ ಇದ್ದಾರೆ ಎಂದರೆ ಸರಿಯಲ್ಲ.

ವಾದಿಯ ತಾಯಿ ಲಕ್ಷ್ಮಿದೇವಿ ದಿನಾಂಕಃ12.08.2015 ರಂದು ಪೌತಿ ಹೊಂದಿರುತ್ತಾರೆ ಎಂದರೆ ಸರಿಯಲ್ಲ. ವಾದಿಯರು ಸದರಿ ದಾವಾ ಸ್ವತ್ತಿನ ಹಕ್ಕು ಮತ್ತು ಮಾಲೀಕತ್ವ ಹೊಂದಿ ಸ್ವಾಧೀನಾನುಭವದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ಈ ದಾವೆಯ ಪ್ರತಿವಾದಿಗಳಾದ ನಾವು ಯಾವುದೇ ಹಕ್ಕು ಮತ್ತು ಅಧಿಕಾರ ಇಲ್ಲದೇ ಇದ್ದರೂ ಸಹ ಕಂದಾಯ ಇಲಾಖೆಯ ಅಧಿಕಾರಿಗೊಂದಿಗೆ ಷಾಮೀಲಾಗಿ ದಾವಾ ಷೆಡ್ಯೂಲ್ ಸ್ವತ್ತಿನ 0.3 0.8 ಎಕರೆ ಮತ್ತು 0.06 ಗುಂಟೆ ಜಮೀನನ್ನು ನಮ್ಮ ಹೆಸರಿಗೆ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನಮ್ಮ ಹೆಸರಿಗೆ ಮಾಡಿಕೊಂಡಿರುವ ಸದರಿ ಜಮೀನುಗಳನ್ನು ದಾವಾ ಬಿ ಷೆಡ್ಯೂಲ್ ಸ್ವತ್ತು ಎಂದು ತೋರಿಸಲಾಗಿದೆ ಎಂದರೆ ಸರಿಯಲ್ಲ.

ಸರ್ವೆ ನಂಬರ್ಃ 2 ರ ವಿಸ್ತೀರ್ಣ 6 ಎಕರೆ ವಿಚಾರವಾಗಿ ಹಿರಿಯೂರು ತಹಶೀಲ್ದಾರ್ ಆದೇಶದ ವಿರುದ್ಧ ಮುಂದೆ ಮೇಲ್ಮನವಿ ಸಲ್ಲಿಸಿದ್ದೆವು ಎಂದರೆ ಸರಿ. ಸದರಿ ಮೇಲ್ಮನವಿ ಚಿತ್ರದುರ್ಗ ಉಪವಿಭಾಗಾಧಿಕಾರಿಯವರ ಮುಂದೆ ಇತ್ಯರ್ಥಕ್ಕೆ ಬಾಕಿ ಇದ್ದಾಗಲೇ ವಾದಿಯ ತಂದೆ ಪೌತಿಯಾಗಿರುತ್ತಾರೆ ಎಂದರೆ ಸರಿ. ಸದರಿ ಮೇಲ್ಮನವಿಯಲ್ಲಿ ವಾದಿಯರನ್ನು ಬಿಟ್ಟು ಅವರ ತಾಯಿಯನ್ನು ಮಾತ್ರ ಪಕ್ಷಗಾರರನ್ನಾಗಿ ಮಾಡಿ ಆದೇಶ ಪಡೆದಿರುತ್ತೇವೆ ಎಂದರೆ ಸರಿಯಲ್ಲ. ಸದರಿ ಆದೇಶದ ವಿರುದ್ಧ ವಾದಿಯರು ಚಿತ್ರದುರ್ಗ ಜಿಲ್ಲಾಧಿಕಾರಿಯವರ ನ್ಯಾಯಾಲಯದ ಮುಂದೆ ಮೇಲ್ಮನವಿ ಸಲ್ಲಿಸಿರುತ್ತಾರೆ ಎಂದರೆ ಸರಿ. ಸದರಿ ಮೇಲ್ಮನವಿ ಆರ್.ಎ ನಂಃ76/2016 ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಮೇಲ್ಮನವಿಯಲ್ಲಿ ನಾವು ವಕೀಲರನ್ನು ನೇಮಿಸಿ ಪ್ರಕರಣ ನಡೆಸಿರುತ್ತೇವೆ ಎಂದರೆ ಸರಿ.

ಸದರಿ ಜಿಲ್ಲಾಧಿಕಾರಿಗಳವರ ನ್ಯಾಯಾಲಯ ಉಪವಿಭಾಗಧಿಕಾರಿಯವರ ನ್ಯಾಯಾಲಯ, ಚಿತ್ರದುರ್ಗ ಆದೇಶವನ್ನು ರದ್ದುಪಡಿಸಿದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಜಿಲ್ಲಾಧಿಕಾರಿಯವರ ನ್ಯಾಯಾಲಯ ಉಳಿದ ಖರುದಾರರನ್ನು/ ವಾದಿಯರನ್ನು ಸೇರಿಸಿ ಮರು ವಿಚಾರಣೆ ನಡೆಸಿ ಪ್ರಕರಣ ಇತ್ಯರ್ಥಪಡಿಸಲು ಆದೇಶಿಸಿದೆ ಎಂದರೆ ಸರಿಯಲ್ಲ. ಸದರಿ ಜಿಲ್ಲಾಧಿಕಾರಿಯವರ ನ್ಯಾಯಾಲಯದ ಆದೇಶದಂತೆ ಚಿತ್ರದುರ್ಗ ಉಪವಿಭಾಗಾಧಿಕಾರಿ ನ್ಯಾಯಾಲಯದಲ್ಲಿ ಆರ್.ಎ. ನಂಃ116/2011-12 ಇತ್ಯರ್ಥಕ್ಕೆ ಬಾಕಿ ಇದೆ ಎಂದರೆ ಸರಿಯಲ್ಲ.

**ಮುಂದುವರಿದ ಪಾಟೀ-ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಅವಕಾಶ ನೀಡಿ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಮುಕ್ತ ಹೇಳಿಕೆ ಮತ್ತು ನನ್ನ ಉಕ್ತ ಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ,. ಹಿರಿಯೂರು.